**"Azadi Ka Amrit Mahotsav"**
**INDIA@75**
**ಕೃಷಿ ವಿಶ್ವ ವಿದ್ಯಾನಿಲಯ**
**ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)**
**ಜಿ.ಕೆ.ವಿ.ಕೆ., ಬೆಂಗಳೂರು–560065**
*** ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ ***

---

**ದಿನಾಂಕ:** 06.08.2021

## ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸೀಮಿತವಾಗಿದೆ

### ಈ ವಾರದ ಹವಾಮಾನ ಮುನ್ಸೂಚನೆ(ಭಾರತೀಯ ಹವಾಮಾನ ಇಲಾಖೆ)

### (ದಿನಾಂಕ 07-08-2021 ರಿಂದ 11-08-2021ವರೆಗೆ)

| ನಿಯತಾಂಕಗಳು | 07.08.2021 | 08.08.2021 | 09.08.2021 | 10.08.2021 | 11.08.2021 |
|---|---|---|---|---|---|
| ಮಳೆ (ಮಿ ಮಿ) | 1 | 2 | 3 | 2 | 3 |
| ಗರಿಷ್ಠ ಉಷ್ಣಾಂಶ °(ಡಿ.ಸೆ. ) | 29 | 29 | 29 | 28 | 28 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 20 | 21 | 21 | 21 | 21 |
| ಮೋಡ (ಪ್ರಮಾಣ) | 7 | 7 | 8 | 8 | 8 |
| ಅರ್ದ್ರತೆ 7.20 ಬೆ (ಶೇ) | 88 | 89 | 89 | 89 | 90 |
| ಅರ್ದ್ರತೆ 2.20 ಮ (ಶೇ) | 81 | 81 | 82 | 82 | 83 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 8 | 7 | 6 | 6 | 5 |
| ಗಾಳಿಯ ದಿಕ್ಕು ( ಡಿಗ್ರಿ) | 252 | 249 | 248 | 248 | 291 |

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮುಂದಿನ ನಾಲ್ಕೈದು ದಿನಗಳಲ್ಲಿ ಹಗುರ ಮಳೆ0ಯಾಗುವ ಸಾಧ್ಯತೆ ಇದೆ. ದಿನದ ಗರಿಷ್ಠ ಉಷ್ಣಾಂಶ **28.0-29.0°C** ಮತ್ತು ಕನಿಷ್ಠ **20.0-21.0°C** ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **88-90 %** ಇದ್ದು ಮಧ್ಯಾಹ್ನ **81-83 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **5-8** ಕಿ.ಮೀ. ವೇಗದಲ್ಲಿ ಬೀಸುವ ಸ0ಭವವಿದೆ.

### "ಅಸಲೇ ಮಳೆಗೆ, ನೆಲವೆಲ್ಲಾ ಹಸಿರೇ!"

- ಆಶ್ಲೇಷ ಮಳೆಯು ಕಾಲವು ಆಗಸ್ಟ್ ತಿಂಗಳ 03 ರಿಂದ ಆಗಸ್ಟ್ ತಿಂಗಳ 16 ರ ವರೆಗೆ ಇರುತ್ತದೆ. ಈ ನಕ್ಷತ್ರದ ಪೂರ್ವ ಒಣ ವಲಯದ ಸರಾಸರಿ ಮಳೆಯು 54.3 ಮಿ.ಮೀ. ವರೆಗೆ ಮಳೆಯಾಗುತ್ತದೆ.

---

### ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

| ಬೆಳೆಗಳು | ಹವಾಮಾನ ಆಧಾರಿತ ಕೃಷಿ ಸಲಹೆಗಳು |
|---|---|
| ಸಾಮಾನ್ಯ | ➢ ಉತ್ತಮ ಮಳೆಯ ಅವಕಾಶ ಇರುವುದರಿಂದ ತೇವಾಂಶದ ಆಧಾರದಲ್ಲಿ ಮುಂಗಾರು ಬಿತ್ತನೆಯನ್ನು ಮುಂದುವರಿಸಿ.<br>➢ ಈಗಾಗಲೇ ಬಿತ್ತನೆಯಾಗಿರುವ ತೊಗರಿ ಮತ್ತು ಜೋಳದ ಬೆಳೆಗಳಲ್ಲಿ ಮೇಲು ಗೊಬ್ಬರವನ್ನು ಕೊಡಬೇಕು.<br>➢ ಗಾಳಿಯ ವೇಗವು ಹೆಚ್ಚಾಗಿರುವುದರಿಂದ ಬಾಳೆ ಮತ್ತು ಇನ್ನಿತರ ತರಕಾರಿ ಬೆಳೆಗಳಿಗೆ ರಕ್ಷಣೆ ಕೊಡಿ.<br>➢ ಗಾಳಿಯ ವೇಗವು ಹೆಚ್ಚಾಗಿರುವ್ಯದರಿಂದ ಕೃಷಿ ಮತ್ತು ತೋಟಗಾರಿಕಾ ಬೆಳೆಗಳಲ್ಲಿ ಔಷದ ಸಿಂಪಡಣೆಯನ್ನು ಮುಂದೂಡಿ.<br>➢ ಆರ್ದ್ರತೆ ಹೆಚ್ಚಿರುವುದರಿಂದ ಬಿತ್ತನೆ ಮಾಡಿರುವ ಬೆಳೆಗಳಲ್ಲಿ ಕೀಟ ಹಾಗೂ ರೋಗಗಳು ಹೆಚ್ಚಬಹುದು. ಆದುದರಿಂದ ಬೆಳೆಗಳನ್ನಾಧರಿಸಿ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಬೇಕು.<br>➢ ಎಲ್ಲೆಲ್ಲಿ ದೀರ್ಘಾವದಿ ಬೆಳೆಗಳು ( ತೊಗರಿ ಮತ್ತು ಹರಳು) ಬಿತ್ತನೆ ಮಾಡಿದಲ್ಲಿ ಕಳೆ ನಿರ್ವಹಣೆ, ಮಣ್ಣು ಮತ್ತು ನೀರಿನ ಸಂರಕ್ಷಣೆಗೆ ಅಂತರ ಬೇಸಾಯವನ್ನು ಕೈಗೊಳ್ಳುವುದು.<br>➢ ಎಲ್ಲೆಲ್ಲಿ ಶಿಫಾರಿಸಿಗಿಂತ ಹೆಚ್ಚು ಗಿಡಗಳ ಸಂಖ್ಯೆ ಇದೆಯೋ ಅಲ್ಲಿ ಬೆಳೆ ಸಸಿಗಳ ಸಂಖ್ಯೆಯನ್ನು ಕಡಿಮೆಗೊಳಿಸುವುದರಿಂದ ಮಣ್ಣಿನ ತೇವಾಂಶದ ಸದ್ಬಳಕೆ ಮಾಡಿಕೊಳ್ಳಬಹುದು.<br>➢ ಕಿತ್ತಂತಹ ಕಳೆ ಮತ್ತು ಬದುಗಳಲ್ಲಿ ಬೆಳೆದಿರುವ ಗ್ಲಿರೀಸಿಡಿಯ (ಹಸಿರೆಲೆ ಗೊಬ್ಬರದ ಗಿಡ) ಸೊಪ್ಪನ್ನು ಉಪಯೋಗಿಸಿಕೊಂಡು ಸಾಲುಗಳ ಮಧ್ಯದಲ್ಲಿ ಭೂ–ಹೊದಿಕೆಯಾಗಿ ಹರಡುವುದು<br>➢ ಇಳಿಜಾರಿಗೆ ಅಡ್ಡಲಾಗಿ ಉಳುಮೆಯನ್ನು ಮಾಡಿ ಇದರಿಂದ ಮಣ್ಣಿನ ಸವಕಳಿ ಕಡಿಮೆಯಾಗುತ್ತದೆ ಮತ್ತು ತೇವಾಂಶದ ಸಂರಕ್ಷಣೆಯಾಗುತ್ತದೆ. |

| | |
|---|---|
| | **ಎರಡುಬೆಳೆ ಪದ್ದತಿಯಲ್ಲಿ ಈ ಕೆಳಗಿನ ಮಧ್ಯಮಾವಧಿ ಮತ್ತು ಕಡಿಮೆ ಅವಧಿ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ**<br>ಮುಸುಕಿನ ಜೋಳ: ಗಂಗಾ–11, ಡೆಕ್ಕನ್–103, ವಿಜಯ ಕಾಂಪೋಸಿಟ್, ಕಾಂಪೋಸಿಟ್ ಎನ್.ಎ.ಸಿ–6004,6002, ನಿತ್ಯಶ್ರೀ–ಸಂಕರಣ ತಳಿ.<br>ಅಲಸಂದೆ : ಟಿ.ವಿ.ಎಕ್ಸ್–944, ಕೆ.ಬಿ.ಸಿ–1<br>ಹೆಸರು :ಪಿ.ಎಸ್–16, ಪಿ.ಡಿ.ಎಮ್–84, 178 , ಉದ್ದು: ಕರಗಾವ್–3, ಟಿ–9, ರಶ್ಮಿ<br>ನವಣೆ: ಆರ್.ಎಸ್–118, ಕೆ–221–1,ಪಿ.ಎಸ್–4, ಎಸ್.ಐ.ಎ–326<br>ಸಾಮೆ: ಸಿ.ಒ–2, ಪಿ,ಆರ್.ಸಿ–3,ಒ.ಎಲ್.ಎಂ–203<br>ಹಾರಕ: ಪಿ.ಎಸ್.ಸಿ–1, ಜೆ.ಎನ್.ಕೆ–364, ಆರ್.ಬಿ.ಕೆ–155, ಜಿ.ಪಿ.ಯು.ಕೆ–3 |
| **ಮಾವು** | ➢ ಮಾವಿನಲ್ಲಿ ಒತ್ತಾಗಿ ಬೆಳೆದಿರುವ ರೆಂಬೆಗಳನ್ನು ಕತ್ತರಿಸಬೇಕು ಇದರಿಂದ ಸೂರ್ಯನ ಬೆಳಕು ಒಳಬಾಗಕ್ಕೆ ಬೀಳುತ್ತದೆ ಇದರಿಂದ ಒಳಭಾಗದಲ್ಲೂ ಮುಂದಿನ ಬಾರಿ ಹೂ ಮತ್ತು ಕಾಯಿ ಕಚ್ಚುತ್ತವೆ. |
| | **ಹೈನುಗಾರಿಕೆ** |
| **ಪಶುಸಂಗೋಪನೆ** | ➢ **ನೆರಡಿ ರೋಗ:** ಜ್ವರ, ಕೆಲವೊಮ್ಮೆ ಇದ್ದಕ್ಕಿದ್ದ ಹಾಗೆ ದನಗಳು ಸಾಯುವುದು, ಮೇವು ಬಿಡುವುದು, ಹೆಚ್ಚು ನಾಡಿ ಬಡಿತ, ಉಸಿರಾಟ, ಸಾವಿನ ಸಮಯದಲ್ಲಿ ಮೂಗು, ಬಾಯಿ ಮತ್ತು ಗುದದ್ವಾರದಿಂದ ರಕ್ತಸ್ರಾವವಾಗುತ್ತದೆ. ಇದರ ಹತೋಟಿಗೆ ಪ್ರತಿ ವರ್ಷ **ಜುಲೈ/ಆಗಸ್ಟ್** ತಿಂಗಳಲ್ಲಿ ಈ ರೋಗದ ಲಸಿಕೆಯನ್ನು ಕೊಡಿಸಿ ತಡೆಗಟ್ಟಬಹುದು.<br>➢ ಬಿಸಿಲು, ಮಳೆ ಮತ್ತು ಬೀಸು ಗಾಳಿಯನ್ನು ತಪ್ಪಿಸಲು ಕೋಳಿ ಮನೆಯನ್ನು ಪೂರ್ವ–ಪಶ್ಚಿಮಕ್ಕೆ ಉದ್ದುದ್ದವಾಗಿ ಆಯಾಕಾರವಾಗಿ ಕಟ್ಟುವುದು ಸೂಕ್ತ. |

**ನೋಡಲ್ ಅಧಿಕಾರಿ:**
ಕೃಷಿ ಹವಾಮಾನ ವಿಭಾಗ
**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**

**ಮೊಬೈಲ್ ಆಫ್:**

- ➢ ರೈತರು "ದಾಮಿನಿ" ಎಂಬ ತಂತ್ರಾಂಶವನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್ ಲೋಡ್ ಮಾಡಿಕೊಂಡರೆ ಇದರಿಂದ ಮಿಂಚಿನ ಮನ್ಸೂಚನೆಯನ್ನು ಅತ್ಯಂತ ನಿಖರವಾಗಿ ತಿಳಿಯಬಹುದು.
- ➢ ಹಾಗೆಯೇ "ಮೌಸಮ್" ಮತ್ತು "ಮೇಘದೂತ್" ತಂತ್ರಾಂಶಗಳಿಂದ ಮಳೆಯ ಮುನ್ಸೂಚನೆ ಮತ್ತು ಕೃಷಿ ಸಲಹೆಗಳನ್ನು ಪಡೆಯಲು ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗೆ *mausam.imd.gov.in* ಜಾಲತಾಣದಲ್ಲಿ ಮಾಹಿತಿ ಪಡೆಯಿರಿ.